(72)

## ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಸ್.ವಿ.ಸಂಕನೂರ ಇವರ ನಿಯಮ-72ರ ಅಡಿಯಲ್ಲಿನ ಗಮನಸೆಳೆಯುವ ಸೂಚನೆ ಸಂಖ್ಯೆ-72ಕ್ಕೆ ಸರ್ಕಾರದ ಉತ್ತರ.

(ಸಂಖ್ಯೆ: ಕವಿಪ/ಪ್ರಶಾ/72/149ನೇಅ/ನಿ-72/2023, ದಿನಾಂಕ: 1.02.2023)

**ವಿಷಯ:-**

ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಸಂಲಗ್ನ ಕಾಲೇಜುಗಳಲ್ಲಿ 2011 ರಿಂದ 2022ರವರೆಗೆ ಕಾರ್ಯನಿರ್ವಹಿಸಿ ನಿವೃತ್ತಿ ಆದ ಪ್ರಾಧ್ಯಾಪಕರ ಹಾಗೂ ಶಿಕ್ಷಕೇತರ ವರ್ಗಕ್ಕೆ DCRG ಮತ್ತು COMMUTATION ಬಾಕಿ ಹಣ ಬಿಡುಗಡೆ ಮಾಡದೇ ಇರುವುದರಿಂದ ನಿವೃತ್ತ ಸಿಬ್ಬಂದಿಯವರು ಸಾಕಷ್ಟು ತೊಂದರೆ ಅನುಭವಿಸುತ್ತಿರುವ ವಿಷಯದ ಕುರಿತು.

**ಉತ್ತರ:-**

ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಕರ್ನಾಟಕ ವಿಶ್ವವಿದ್ಯಾಲಯಕ್ಕೆ 2022-23ನೇ ಸಾಲಿಗೆ ಆಯವ್ಯಯದಲ್ಲಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿಶ್ವವಿದ್ಯಾಲಯ ಹೆಸರು ಮತ್ತು ಲೆಕ್ಕ ಶೀರ್ಷಿಕೆ | ಉಪ ಲೆಕ್ಕ ಶೀರ್ಷಿಕೆ | ಒಟ್ಟು ಹಂಚಿಕೆ | ಒಟ್ಟು ಬಿಡುಗಡೆ |
|---|---|---|---|---|
| 1 | ಕನಾಟಕ ವಿಶ್ವವಿದ್ಯಾಲಯ 2202-03-102-0-02 | 101-ಸಹಾಯಾನುದಾನ-ವೇತನಗಳು | 9471.00 | 9471.00 |
| | | 118 -ಸಹಾಯಾನುದಾನ-ವಿಶ್ರಾಂತಿ ವೇತನ | 5000.00 | 5000.00 |
| | | ಒಟ್ಟು | 14471.00 | 14471.00 |

ಮುಂದುವರೆದು, 2022-23ನೇ ಸಾಲಿಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಪಿಂಚಣಿ ಮೊತ್ತ ಪಾವತಿಸುವ ಸಲುವಾಗಿ 2022-23ನೇ ಸಾಲಿನ ಪೂರಕ ಅಂದಾಜು-1ರಲ್ಲಿ ಆರ್ಥಿಕ ಇಲಾಖೆಯು ರೂ.3625.00ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಿರುತ್ತದೆ.

ಅದರಂತೆ, 2022-23ನೇ ಸಾಲಿಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಪಿಂಚಣಿ ಮೊತ್ತ ಪಾವತಿಸುವ ಸಲುವಾಗಿ ರೂ.3625.00ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 104 ಹೆಚ್‌ಪಿಯು 2022, ದಿನಾಂಕ: 09.09.2022 ಮತ್ತು 31.10.2022ರನ್ವಯ ಈ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಒದಗಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ವೆಚ್ಚ ಮಾಡುವ ಷರತ್ತಿಗೊಳಪಟ್ಟು ಬಿಡುಗಡೆಗೊಳಿಸಿ ಆದೇಶಿಸಿದೆ.

ಸಂಖ್ಯೆ: ಇಡಿ 23 ಹೆಚ್‌ಪಿಯು 2023)

**(ಡಾ: ಅಶ್ವಥ್ ನಾರಾಯಣ ಸಿ.ಎನ್)**
ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ-ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ & ಜೀವನೋಪಾಯ ಸಚಿವರು

Scanned with CamScanner